


## ಅಭಿಮಾನಕ್ಕೆ ಮದ್ದು

ಶ್ರೀ ರಾಮಾನುಜಾಚಾರ್ಯರು ಶ್ರೀವೈಷ್ಣವ ಸಂಪ್ರದಾಯದ ಪ್ರವರ್ತಕರು. ಅವರು ವೃದ್ಧರಾಗಿದ್ದಾಗ ಗಂಗಾನದಿಗೆ ಸ್ನಾನಕ್ಕೆ ಹೋಗುತ್ತಿದ್ದರು. ಹೋಗುವಾಗ ಒಬ್ಬ ಬ್ರಾಹ್ಮಣಶಿಷ್ಯನ ಹೆಗಲು ಹಿಡಿದು ಹೋಗುತ್ತಿದ್ದರು. ಸ್ನಾನ ಮಾಡಿ ಬರುವಾಗ ಒಬ್ಬ ಶೂದ್ರಶಿಷ್ಯನ ಹೆಗಲು ಹಿಡಿದು ಬರುತ್ತಿದ್ದರು.

ಇದನ್ನು ಕಂಡು ಮಡಿವಂತರಿಗೆಲ್ಲ ಆಶ್ಚರ್ಯ. ಅವರು ಶ್ರೀರಾಮಾನುಜಾಚಾರ್ಯರನ್ನು ಕುರಿತು ಇದರ ಅರ್ಥವೇನು ಎಂದು ಪ್ರಶ್ನಿಸಿದರು. ಅದಲ್ಲದೆ "ಸ್ನಾನ ಮಾಡಿದ ಮೇಲೆ ಮಡಿಯಾಗಿ ಬ್ರಾಹ್ಮಣಶಿಷ್ಯನ ಹೆಗಲು ಹಿಡಿದು ನಡೆದುಬರುವುದು ಉಚಿತವಲ್ಲವೇ ?" ಎಂದು ಕೇಳಿದರು.

ಆಚಾರ್ಯರು ಹೀಗೆ ಉತ್ತರಿಸುತ್ತಾರೆ: "ನಿಜ, ನಾನು ಉತ್ತಮಕುಲದವನು ಎಂಬ ಕೊಳೆ ಗಂಗೆಯಲ್ಲಿ ಮಿಂದರೂ ಹೋಗದು. ಅದಕ್ಕೇ ಆ ಕೊಳೆಯನ್ನು ಹೋಗಲಾಡಿಸಲು ನಾನು ಸ್ನಾನವಾದ ಮೇಲೆ ಶೂದ್ರಶಿಷ್ಯನ ಹೆಗಲ ಮೇಲೆ ಕೈಯಿಟ್ಟುಕೊಂಡು ಬರುತ್ತೇನೆ"

◆